# ರಾಯಚೂರು ಜಿಲ್ಲಾ ಮಟ್ಟದ ಎಸ್ ಎಸ್ ಎಲ್ ಸಿ ರಚನಾ – 3 ರ ತರಬೇತಿಯಲ್ಲಿ ನೀಲ ನಕಾಶೆಯ ಪ್ರಕಾರ ತಯಾರಿಸಿದ ಪ್ರಶ್ನೆ ಪತ್ರಿಕೆಗಳು

## ಕಿತ್ತೂರು ತಂಡದ ಮಾದರಿ ಪ್ರಶ್ನೆ ಪತ್ರಿಕೆ – 4

ಪ್ರಶ್ನೆ I] ಈ ಕೆಳಗಿನ ಪ್ರಶ್ನೆಗಳಿಗೆ/ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಸೂಕ್ತ ಉತ್ತರಗಳನ್ನು ಆರಿಸಿ ಬರೆಯಿರಿ. 10 x 1 = 10

1 ದುಲೀಪಸಿಂಗನ ಪ್ರಧಾನಿ__________.

ಎ) ಪ್ರತಾಪಸಿಂಗ್ ಬಿ) ಲಾಲಸಿಂಗ್ ಸಿ) ರಣಜಿತ್ ಸಿಂಗ್ ಡಿ) ಜಯಸಿಂಗ್

2. ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ ಇದ್ದ ದೇಶಿಯ ಸಂಸ್ಥಾನಗಳ ಸಂಖ್ಯೆ _________

ಎ) 545 ಬಿ) 552 ಸಿ) 560 ಡಿ) 562

3. ಚೀನಾ ಈ ಕೆಳಗಿನ ರಾಜ್ಯವನ್ನು ತನ್ನದೆಂದು ಪ್ರತಿಪಾದಿಸಿದ್ದು ಭಾರತ & ಚೀನಾಗಳ ಪರಸ್ಪರ ಸಂಬಂಧದ ಮೇಲೆ ದುಷ್ಪರಿಣಾಮ ಬೀರಿದೆ.

ಎ) ನಾಗಾಲ್ಯಾಂಡ್ ಬಿ) ಹಿಮಾಚಲ ಪ್ರದೇಶ ಸಿ) ಆಸ್ಸಾಂ ಡಿ) ಅರುಣಾಚಲ ಪ್ರದೇಶ

4. ವಿಶ್ವಸಂಸ್ಥೆಯ ರಚನೆಯಲ್ಲಿ ಈ ಕೆಳಗಿನ ಯಾರು ಪ್ರಮುಖ ಪಾತ್ರ ವಹಿಸಿರುವುದಿಲ್ಲ.

ಎ) ವಿನಸ್ಟಂಟ್ ಚರ್ಚಿಲ್ ಬಿ) F D ರೂಸವೆಲ್ಟ್ ಸಿ) ಲೆನಿನ್ ಡಿ) ಸ್ಟಾಲಿನ್

5. ವರದಕ್ಷಿಣೆ ನಿಷೇಧ ಕಾಯ್ದೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ವರ್ಷವು ಸರಿ ಹೊಂದುವುದು.

ಎ) 1961 ಬಿ) 1971 ಸಿ) 1981 ಡಿ) 1991

6. ಭಾರತದ ಅತ್ಯಂತ ಉದ್ದವಾದ ಆಣೆಕಟ್ಟು ಯೋಜನೆ _________

ಎ) ಬಾಕ್ರಾ-ನಂಗಲ್ ಯೋಜನೆ ಬಿ) ದಾಮೋದರ ನದಿ ಕಣಿವೆ ಯೋಜನೆ

ಸಿ) ನಾಗಾರ್ಜುನ ಸಾಗರ ಯೋಜನೆ ಡಿ) ಹಿರಾಕುಡ್ ಯೋಜನೆ

7. ಪ್ರಪಂಚದಲ್ಲಿಯೇ ಚಹ ಉತ್ಪಾದನೆಯಲ್ಲಿ ಪ್ರಥಮ ಸ್ಥಾನ ಪಡೆದಿರುವ ದೇಶ ________

ಎ) ಚೀನಾ ಬಿ) ಭಾರತ ಸಿ) ಬ್ರೆಜಿಲ್ ಡಿ) ಅರ್ಜಂಟೈನಾ

8. ಮಾನವನ ಜೀವನ ಮಟ್ಟವನ್ನು ________ ಮೂಲಕ ಅಳೆಯಲಾಗುತ್ತದೆ.

ಎ) F C I ಬಿ) G E I ಸಿ) G D P ಡಿ) H D I

9. ಪ್ರತಿಯೊಬ್ಬರು ಬ್ಯಾಂಕ್ ಖಾತೆ ಹೊಂದಲು ಕೇಂದ್ರ ಸರಕಾರ ಜಾರಿಗೆ ತಂದ ಯೋಜನೆ.

ಅ) ಜನಮನ ಯೋಜನೆ ಬ) ಜನಧನ ಯೋಜನೆ ಕ) ಉಳಿತಾಯ ಖಾತೆ ಯೋಜನೆ ಡ) ಯಾವುದು ಅಲ್ಲ

10. NASDAQ ನಲ್ಲಿ ನೊಂದಾಯಿತಗೊಂಡ ಭಾರತದ ಪ್ರಪ್ರಥಮ ತಂತ್ರಜ್ಞಾನ ಸಂಸ್ಥೆ ________

ಎ) ಇನ್ಫೋಸಿಸ್ ಬಿ) ವಿಪ್ರೋ ಸಿ) ರಿಲಯನ್ಸ್ ಡಿ) ಬಯೋಕಾನ್

ಪ್ರಶ್ನೆ II] ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 14 x 1 = 14

11. ಮೌಖಿಕ ಆಕಾರಗಳಿಂದ ಚರಿತ್ರೆ ಬರವಣಿಗೆಯನ್ನು ಏನೆಂದು ತಿಳಿಸುತ್ತದೆ?

12. ರಾಜ್ಯ ಪುನರ್ ವಿಂಗಡನಾ ಆಯೋಗದ ಅಧ್ಯಕ್ಷರು ಯಾರು?

13. ಹಿಟ್ಲರನು 'ಗೋಬೆಲ್ಸ್'ಎಂಬ ಮಂತ್ರಿಯನ್ನು ನೇಮಕ ಮಾಡಲು ಕಾರಣವೇನು?

14. ಲಾಭಕೋರತನದಿಂದ ಗ್ರಾಹಕರಿಗೆ ನಷ್ಟವಾಗುತ್ತದೆ. ಹೇಗೆ ವಿಶ್ಲೇಷಿಸಿ.

15. ಅಂತರಾಷ್ಟ್ರೀಯ ಕಾರ್ಮಿಕ ಸಂಘದ ಸ್ಥಾಪನೆಯ ಉದ್ದೇಶವೇನು?.

16. ಸಂವಿಧಾನದ 17ನೇ ವಿಧಿಯ ಮುಖ್ಯ ಆಶಯವೇನು?

17. ಗರ್ಭದಲ್ಲಿರುವ ಲಿಂಗ ಕಂಡುಕೊಳ್ಳುವಿಕೆ ಕಾನೂನು ಬಾಹಿರ ಏಕೆ?.

18. ಭಾರತವು ಯಾವ ಬಗೆಯ ಉಷ್ಣಾಂಶವನ್ನು ಹೊಂದಿದೆ?

19. ಜೆಡ್ ಬೇಸಾಯ ಎಂದರೇನು?

20. ಶಕ್ತಿ ಸಂಪನ್ಮೂಲಗಳ ಕೊರತೆ ನಿವಾರಿಸಲು ಯಾವುದಾದರೂ ಎರಡು ಸಲಹೆಗಳನ್ನು ನೀಡಿ.

21. ಸಕ್ಕರೆ ಕೈಗಾರಿಕೆಗಳು ಹೆಚ್ಚಾಗಿ ಕಬ್ಬು ಬೆಳೆಯುವ ಪ್ರದೇಶಗಳಲ್ಲಿ ಕಂಡು ಬರುತ್ತವೆ. ಈ ಹೇಳಿಕೆಯನ್ನು ವಿಶ್ಲೇಷಿಸಿ.

22. ತಲಾ ಆದಾಯವು ಅಭಿವೃದ್ಧಿಯ ನೈಜ ಮಾಪಕವಾಗಲಾರದು ಹೇಗೆ?

23. ಭಾರತದ ಹಣಕಾಸು ವರ್ಷವು ಯಾವಾಗ ಪ್ರಾರಂಭವಾಗಿ ಯಾವಾಗ ಮುಕ್ತಾಯವಾಗುತ್ತದೆ?

24. ವಿಪ್ರೋ ಸಂಸ್ಥೆಯ ಅಧ್ಯಕ್ಷರು ಯಾರು?

ಪ್ರಶ್ನೆ III] ಈ ಕೆಳಗಿನ ಪ್ರಶ್ನೆಗಳಿಗೆ ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. 15 x 2 = 30

25. ಕರ್ನಾಟಿಕ್ ಯುದ್ಧಗಳು ಬ್ರಿಟಿಷರಿಗೆ ಭಾರತದಲ್ಲಿ ನೆಲೆಯೂರಲು ಹೇಗೆ ಸಹಾಯಕವಾದವು? ಚರ್ಚಿಸಿ.

26. ಟಿಪ್ಪು ಬ್ರಿಟಿಷರ ವಿರುದ್ಧ ಹೋರಾಡಲು ಯುದ್ಧಕ್ಕೆ ಸಜ್ಜುಗೊಂಡ ಬಗೆಯನ್ನು ತಿಳಿಸಿ.

27. ದಯಾನಂದ ಸರಸ್ವತಿಯವರು 'ವೇದಗಳಿಗೆ ಹಿಂದಿರುಗಿ' ಎಂದು ಕರೆ ಕೊಡಲು ಕಾರಣವೇನು? ಅಥವಾ

ಬ್ರಹ್ಮ ಸಮಾಜದ ಬೋಧನೆಗಳು ಯಾವುವು?ತಿಳಿಸಿ.

28. ಹಿಟ್ಲರನ ನಾಝಿ ಸಿದ್ಧಾಂತವು ಜರ್ಮನಿಯನ್ನು ಹೇಗೆ ಹಾಳುಮಾಡಿತು ತಿಳಿಸಿ.

29. ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ಪರಿಣಾಮಗಳು ಯಾವುವು?

30. ಕೋಮುವಾದ ಸಮಾಜದ ಐಕ್ಯತೆಯ ಶತ್ರುವಾಗಿದೆ. ಹೇಗೆ?

31. ಮೌನ ಕಣಿವೆ ಆಂದೋಲನ ಎಂದರೇನು?

32. ಭಾರತದ ವಾಯುಗುಣದ ಮೇಲೆ ಹಿಮಾಲಯ ಪರ್ವತಗಳು ಹೇಗೆ ಪ್ರಭಾವ ಬೀರುತ್ತವೆ? ತಿಳಿಸಿ.

33. ಮೆಕ್ಕಲು ಮಣ್ಣಿನ ಗುಣಲಕ್ಷಣ ತಿಳಿಸಿರಿ.

34. ಭಾರತದ ಎಲೆ ಉದುರುವ ಅರಣ್ಯಗಳ ಲಕ್ಷಣಗಳನ್ನು ಪಟ್ಟಿ ಮಾಡಿರಿ.

35. GPS ಸಿಸ್ಟಂನ ಕಾರ್ಯವನ್ನು ವಿಶ್ಲೇಷಿಸಿ.

36. ವಲಸೆಗೆ ಕಾರಣಗಳೇನು?

37. ಭೂಕುಸಿತದಿಂದ ಉಂಟಾಗುವ ಪರಿಣಾಮಗಳಾವುವು?

38. ಆರ್ಥಿಕ ಯೋಜನೆ ಎಂದರೇನು? ಆರ್ಥಿಕ ಯೋಜನೆಯ ಪಿತಾಮಹ ಯಾರು?.

39. ಜಾಗತೀಕರಣದಿಂದಾಗುವ ಅನುಕೂಲಗಳೇನು?

ಪ್ರಶ್ನೆ IV] ಈ ಕೆಳಗಿನ ಪ್ರಶ್ನೆಗಳಿಗೆ ಐದು - ಆರು ವಾಕ್ಯಗಳಲ್ಲಿ ಉತ್ತರಿಸಿರಿ. 6 x 3 = 18

40. ಇಂಗ್ಲೀಷ್ ಸೈನ್ಯದಲ್ಲಿದ್ದ ಭಾರತೀಯ ಸಿಪಾಯಿಗಳ ಸ್ಥಿತಿಯು ಶೋಚನೀಯವಾಗಿತ್ತು ಎಂದು ಹೇಗೆ ಹೇಳುವಿರಿ.

ಅಥವಾ

ಕೈಗಾರಿಕಾ ಕ್ರಾಂತಿಯು ಭಾರತದ ಗೃಹ ಉದ್ಯಮವನ್ನು ನಾಶ ಮಾಡಿತು. ಈ ಹೇಳಿಕೆಯನ್ನು ಸಮರ್ಥಿಸಿ.

41. ಪ್ರಚಲಿತ ಜಗತ್ತಿಗೆ ನಿಶ್ಯಸ್ತ್ರೀಕರಣವು ಅತಿ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ ತಿಳಿಸಿ. ಅಥವಾ

ಭಾರತ & ಪಾಕಿಸ್ತಾನ ದೇಶಗಳು ಸೌಹಾರ್ಧತೆಯ ವಾತಾವರಣವನ್ನು ಹೋಂದಿಲ್ಲದಿರಲು ಕಾರಣಗಳೇನು?

42. ಅಸ್ಪೃಶ್ಯತಾ ನಿವಾರಣೆಗೆ ಭಾರತ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು? ಅಥವಾ

ನಿರುದ್ಯೋಗದಿಂದ ಸಮಾಜದ ಮೇಲಾಗುವ ದುಷ್ಪರಿಣಾಮಗಳನ್ನು ತಿಳಿಸಿರಿ.

43. ಭಾರತದ ಪ್ರಮುಖ ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಪಟ್ಟಿ ಮಾಡಿರಿ. ಅಥವಾ

ಭಾರತದ ಪ್ರಮುಖ ಕಬ್ಬಿಣ & ಉಕ್ಕಿನ ಕೈಗಾರಿಕೆಗಳನ್ನು ಪಟ್ಟಿ ಮಾಡಿರಿ.

44. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರಿಕರಣದ ಹಿನ್ನೆಲೆಯಲ್ಲಿ ತಿಳಿಸಿ. ಅಥವಾ

ಕೇಂದ್ರ ಸರಕಾರದ ಯೋಜನಾ ವೆಚ್ಚಗಳನ್ನು ಪಟ್ಟಿ ಮಾಡಿರಿ.

45. ಬ್ಯಾಂಕ ವ್ಯವಹಾರಕ್ಕೆ ಸಂಬಂಧಿಸಿದಂತೆ ಗಮನಿಸಬಹುದಾದ ಗುಣಲಕ್ಷಣಗಳನ್ನು ತಿಳಿಸಿ. ಅಥವಾ

ಜೀವ ವಿಮೆಯ ಅವಶ್ಯಕತೆಯನ್ನು ತಿಳಿಸಿ.

ಪ್ರಶ್ನೆ V] ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ. 1 x 4 = 4

46. ದೇಶಿಯ ಸಂಸ್ಥಾನಗಳ ವಿಲೀನಿಕರಣದಲ್ಲಿ ಸರ್ಧಾರ್ ವಲ್ಲಭ ಬಾಯಿ ಪಟೇಲ್ ಪಾತ್ರವನ್ನು ವಿವರಿಸಿ.

47. ಅಂದವಾದ ಭಾರತ ನಕಾಶೆ ರಚಿಸಿ. ಕೆಳಗಿನವುಗಳನ್ನು ಗುರುತಿಸಿ. 1 + 3 = 4

ಎ) ಬಾಕ್ರಾ ನಂಗಲ್ ಬಿ) ತಾರಾಪುರ ಸಿ) ಲಕ್ಷ ದ್ವೀಪಗಳು